# KARNATAKA LOKAYUKTA

No.UPLOK-1/DE/97/16/ARE-16
DE.604/17 and 130/2018/ARE-16

Multi Storied Building,
Dr. B.R. Ambedkar Veedhi,
Bengaluru-560 001.
Dated 12.11.2021.

## RECOMMENDATION

Sub:- Departmental inquiry against (1) Shri Venkatappa, the then District Manager, Dr.B.R.Ambedkar Development Corporation Limited, Chitradurga, (2) Sri Damodar Naik, Retired Assistant District Manager, Dr.B.R.Ambedkar Development Corporation Limited, (3)Sri Nooruddin D.Mokashi,(expired) Taluk Development Officer, Dr.B.R.Ambedkar Development Corporation Limited, Raichur, (4) Sri Sharanappa, PDO, Hirebuduru Grama panchayath, Devadurga Taluk, Raichur District (5) Sri Gopalappa Kattimani, (expired) District Manager, Dr.B.R.Ambedkar Development Corporation Limited, Karnataka State SC/ST Development Corporation Limited, Raichur, and (6) Sri Tukaram Kalyankar, the then Tahsildar, Devadurga Taluk (Under Secretary to Govt., Law Department, Karnataka Government Secretariat)-reg.

Ref:- 1) Proceedings Order No.ADC/CA/EV/Loka/2015-16/31395 dated 26.3.2016 of the Managing Director, Dr.B.R.Ambedkar Development Corporation Limited, Bangalore.

2) Govt.Order No.SWD 464 SDE 2015 dated 20.04.2017.

3) Govt. Order No.RDP 534 GPS 2015 dated 19/21.11.2015.

4) Govt.Order No.DPAR 22 SEV 2015 dated 29.08.2017.

2) Nomination order No. (1)UPLOK-1/DE.97/2016 dated 11.04.2016,(2)Uplok-1/DE.604/2017 dated 27.04.2017 and (3) Uplok-1/DE.130/2018 dated 15.03.2018 of Upalokayukta, State of Karnataka.

3) Inquiry report dated 11.11.2021 of Additional Registrar of Enquiries-16(I/c), Karnataka Lokayukta, Bengaluru.

~~~~~

The Government/Disciplinary Authority by its orders dated 20.04.2017, 19/21.11.2015, and 29.08.2017 initiated the disciplinary proceedings against (1) Shri Venkatappa, the then District Manager, Dr.B.R.Ambedkar Development Corporation Limited, Chitradurga, (2) Sri Damodar Naik, Retired Assistant District Manager, Dr.B.R.Ambedkar Development Corporation Limited, (3)Sri Nooruddin D.Mokashi, Taluk Development Officer, Dr.B.R.Ambedkar Development Corporation Limited, Raichur, (4) Sri Sharanappa, PDO, Hirebuduru Grama panchayath, Devadurga Taluk, Raichur District (5) Sri Gopalappa Kattimani, District Manager, Dr.B.R.Ambedkar Development Corporation Limited, Karnataka State SC/ST Development Corporation Limited, Raichur, and (6) Sri Tukaram Kalyankar, the then Tahsildar, Devadurga Taluk (Under Secretary to Govt., Law Department, Karnataka Government Secretariat), [hereinafter referred to as Delinquent
~~~~~

Government Officers/officials, for short as 'DGOs 1 to 6' respectively ] and entrusted the departmental inquiry to this Institution.

2. This Institution by Nomination Order bearing No. UPLOK-1/DE.97/2016 dated 11.04.2016, nominated Additional Registrar of Enquiries-5, Karnataka Lokayukta, Bengaluru, as the Inquiry Officer to frame charges and to conduct departmental inquiry against DGOs 1 to 4 for the alleged charge of misconduct, said to have been committed by them. Subsequently, by order dated 3.8.2016, Additional Registrar of Enquiries-11, was re-nominated as the Inquiry Officer to continue the said inquiry.

3. Thereafter, by nomination order No. Uplok-1/DE.604/2017 dated 27.04.2017, Additional Registrar of Enquiries-11, was nominated as the Inquiry Officer to frame charges and to conduct inquiry against DGO.5 Sri Gopalappa Kattimani. By order dated 23.09.2017, this matter was clubbed with DE.97.2016.

4. Thereafter, by nomination order No. Uplok-1/DE.130/2018 dated 15.03.2018, Additional Registrar of Enquiries-11, was nominated as the Inquiry Officer to frame charges and to conduct inquiry against DGO.6 Sri Tukaram Kalyankar. By order dated 11.09.2019, this matter was clubbed with DE.97.2016. Finally, by order dated 07.02.2019, Additional Registrar of Enquiries-16, was re-nominated as the Inquiry Officer to continue all the abovesaid three inquiries against DGOs 1 to 6.

5. The DGOs were tried for the following charges:-

"ಅ.ಸ.ನೌ.1 ರಿಂದ ಅ.ಸ.ನೌ.3 ಆದ ನೀವುಗಳು:

(ಅ) ದೇವದುರ್ಗ ತಾಲ್ಲೂಕು ಬೂದಿನಾಳ ಗ್ರಾಮದ ಶ್ರೀ ಅಮರಪ್ಪ ತಂದೆ ಬೂದೆಪ್ಪಗೌಡ, ಸಾ: ಜಿನ್ನಾಪುರರವರ ಹೆಸರಿನಲ್ಲಿದ್ದ ಸರ್ವೇ ನಂ.34/4ರಲ್ಲಿ 4 ಎಕರೆ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 08.03.2013ರಂದು ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಭೂಒಡೆತನ ಯೋಜನೆಯಡಿ ಫಲಾನುಭವಿಗಳಿಗೆ ಖರೀದಿಸಲು ನಿರ್ಣಯ ತೆಗೆದುಕೊಂಡಿರುತ್ತೀರಿ.

(ಆ) ಅ.ಸ.ನೌ.2 ಆದ ನೀವು ದಿನಾಂಕ 03.03.2014ರಂದು ರಾಯಚೂರು ಜಿಲ್ಲಾ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ ಪ್ರಭಾರ ಜಿಲ್ಲಾ ವ್ಯವಸ್ಥಾಪಕರಾಗಿದ್ದು, ಫಲಾನುಭವಿಗಳ ಅರ್ಹತೆಯ ಬಗ್ಗೆ ಪುನರ್‌ಪರಿಶೀಲನೆ ಮಾಡದೇ, ಜಮೀನನ್ನು ಹೊಂದಿದ್ದ ಒಂದೇ ಕುಟುಂಬದವರಾದ ಶ್ರೀಮತಿ ಈರಮ್ಮ ಗಂಡ ಪಾಪಯ್ಯರವರಿಗೆ 1 ಎಕರೆ ಜಮೀನನ್ನು, ಶ್ರೀಮತಿ ಕಾಂತಮ್ಮ ಗಂಡ ಬೂದೆಪ್ಪರವರಿಗೆ 1 ಎಕರೆ ಜಮೀನನ್ನು ಮತ್ತು ಶ್ರೀಮತಿ ರಿಂದಮ್ಮ ಗಂಡ ಬಸಪ್ಪರವರಿಗೆ 1 ಎಕರೆ ಜಮೀನನ್ನು ಹಾಗೂ ತನ್ನ ಮಾವನ ಹೆಸರಿನಲ್ಲಿ ಜಮೀನನ್ನು ಹೊಂದಿದ್ದ ಶ್ರೀಮತಿ ಸಂಗಮ್ಮ ಗಂಡ ಮೂಕಯ್ಯರವರಿಗೆ 1 ಎಕರೆ ಜಮೀನನ್ನು ಬೂದಿನಾಳ ಗ್ರಾಮದ ಸರ್ವೇ ನಂ.34/4ರಲ್ಲಿ ನೋಂದಣಿ ಮಾಡಲು ಪ್ರಮಾಣ ಪತ್ರ ನೀಡಿ ಕರ್ತವ್ಯಲೋಪವೆಸಗಿರುತ್ತೀರಿ.

ಇ) ಅ.ಸ.ನೌ.3 ಆದ ನೀವು ರಾಯಚೂರು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಹೆಚ್ಚುವರಿ ಜಿಲ್ಲಾ ವ್ಯವಸ್ಥಾಪಕರಾಗಿ ಕೆಲಸ ನಿರ್ವಹಿಸುವಾಗ ಫಲಾನುಭವಿಗಳ ಅರ್ಹತೆಯ ಬಗ್ಗೆ ಪುನರ್‌ಪರಿಶೀಲನೆ ಮಾಡದೇ, ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಕಳುಹಿಸುವ ಮೂಲಕ ಕರ್ತವ್ಯಲೋಪವೆಸಗಿರುತ್ತೀರಿ.

ಆದ್ದರಿಂದ, ಅಸನೌ 1 ರಿಂದ ಅಸನೌ 3 ಆದ ನೀವುಗಳು ಸಾರ್ವಜನಿಕ ನೌಕರರಾಗಿ ನಿಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ ಹಾಗೂ ಕರ್ತವ್ಯ ಲೋಪವೆಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ (3) (1) ರಿಂದ (3) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಮಾಡಿರುತ್ತೀರಿ.

**Articles of Charge framed against DGO-4 & 5 is as under:**

"ನೀವು ಎಂದರೆ ಶರಣಪ್ಪ ಆದ ನೀವು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಹಿರೇಬೂದೂರು ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಮತ್ತು ರಾಯಚೂರು ಜಿಲ್ಲೆಯ ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಜಿಲ್ಲಾ ವ್ಯವಸ್ಥಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಬೂದಿನಾಳ್ ಗ್ರಾಮದಲ್ಲಿ ಸರ್ವೆ ನಂ.34/4ರಲ್ಲಿ 4.14 ಎಕರೆ ಜಮೀನನ್ನು ಭೂಮಾಲೀಕರಿಂದ ನೇರವಾಗಿ ಭೂಒಡೆತನ ಯೋಜನೆಯಡಿ ಆಯ್ಕೆಯಾದ ಫಲಾನುಭವಿಯಾದ ಶ್ರೀಮತಿ ಈರಮ್ಮ ಕೋಂ ಪಾಪಯ್ಯ ಇವರು ಸರ್ವೆ ನಂ. 110ರಲ್ಲಿ 2 ಎಕರೆ, ಈರಮ್ಮನ ಸೊಸೆಯಾದ ಶ್ರೀಮತಿ ಕಾಂತಮ್ಮ ಮತ್ತು ರಿಂದಮ್ಮ ಮತ್ತು ಶ್ರೀಮತಿ ಸಂಗಮ್ಮ ಕೋಂ ಬಸಪ್ಪ ಇವರು ಹದ್ದಿನಾಳು ಗ್ರಾಮದ ಸರ್ವೆ ನಂ. 55/1ರಲ್ಲಿ 37 ಗುಂಟೆ ಮತ್ತು 55/ಆರಲ್ಲಿ 38 ಗುಂಟೆ ಜಮೀನು ಹೊಂದಿದ್ದರೂ ಸಹ ದಿನಾಂಕ: 02/08/2013ರಂದು ದೇವದುರ್ಗ ತಾಲ್ಲೂಕಿನ ಗಬ್ಬೂರು ಹೋಬಳಿ ವ್ಯಾಪ್ತಿಯಲ್ಲಿ ಯಾವುದೇ ಕೃಷಿ ಜಮೀನು ಹೊಂದಿಲ್ಲವೆಂದು ಸುಳ್ಳು ಪ್ರಮಾಣ ಪತ್ರ ನೀಡಿದ್ದರೂ ನೀವುಗಳು ಫಲಾನುಭವಿಗಳ ಆಯ್ಕೆಯ ಕಾಲಕ್ಕೆ ಫಲಾನುಭವಿಗಳ ಕುಟುಂಬ, ಜಮೀನು ಹೊಂದಿರುವ ಬಗ್ಗೆ ಮತ್ತು ನಿಗಮದ ನಿಯಮಾನುಸಾರ ಅನರ್ಹರಾಗಿರುವ ಬಗ್ಗೆ ಯಾವುದೇ ತನಿಖೆಗಳನ್ನು ಮಾಡದೇ ಮೇಲ್ಕಾಣಿಸಿದ ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದರ ಮೂಲಕ ಸರ್ಕಾರಿ ನೌಕರರಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ii) ಮತ್ತು(iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

**Articles of Charge framed as against DGO-6 is as under:**

ಆಪಾದಿತ ಸರ್ಕಾರಿ ನೌಕರರಾದ ಶ್ರೀ ತುಕಾರಾಮ ಕಲ್ಯಾಣಕರ, ಸರ್ಕಾರದ ಅಧೀನ ಕಾರ್ಯದರ್ಶಿ, ಕಾನೂನು ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ, ಬೆಂಗಳೂರು ಆದ ನೀವು ದೇವದುರ್ಗ ತಾಲ್ಲೂಕಿನಲ್ಲಿ ನಿಯೋಜನೆ ಮೇರೆಗೆ ತಹಶೀಲ್ದಾರ್ ಆಗಿ 2014ರ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿಕೊಂಡಿದ್ದಾಗ ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ರಾಯಚೂರು ರವರಿಗೆ ಭೂಒಡೆತನ ಯೋಜನೆಯ ಜಿನ್ನಾಪುರ ಗ್ರಾಮದ ಅಮರಪ್ಪ ಬಿನ್ ಬೂದನ ಗೌಡ ರವರು ಬೂದಿನಾಳ್ ಗ್ರಾಮದಲ್ಲಿ ಸರ್ವೆ ನಂ.34/4ರಲ್ಲಿ 4.14 ಎಕರೆ ಜಮೀನನ್ನು ಮಾರಾಟ ಮೂಲಕ ಪಡೆದುಕೊಂಡು, ಅರ್ಹ ಫಲಾನುಭವಿಗಳಿಗೆ ಜಮೀನು ಮಂಜೂರು ಮಾಡಬೇಕಾಗಿದ್ದು ಶ್ರೀಮತಿ ಈರಮ್ಮ, ಶ್ರೀಮತಿ ಕಾಂತಮ್ಮ, ಶ್ರೀಮತಿ ರಿಂದಮ್ಮ, ಶ್ರೀಮತಿ ಸಂಗಮ್ಮ ರವರುಗಳಿಗೆ ನೀವು ದಿನಾಂಕ 27-7-2013ರಂದು ನೀಡಿದ ಪ್ರಮಾಣ ಪತ್ರದಲ್ಲಿ ಸದರಿ ಮೂವರು ಜಮೀನು ಹೊಂದಿದ್ದು ಭೂ ಒಡೆತನ ಯೋಜನೆಯಡಿಯಲ್ಲಿ ಜಮೀನು ಪಡೆಯಲು ಅರ್ಹರಲ್ಲೆಂದು ಪ್ರಮಾಣೀಕರಿಸಿದ್ದು ನಂತರ ನೀವು ದಿನಾಂಕ 02/08/2013 ರಂದು ನೀಡಿದ ಪ್ರಮಾಣ ಪತ್ರದಲ್ಲಿ ಈರಮ್ಮ, ಕಾಂತಮ್ಮ, ರಿಂದಮ್ಮ ಮತ್ತು ಸಂಗಮ್ಮ ರವರುಗಳು ಜಮೀನು ಹೊಂದಿಲ್ಲವೆಂದು ಪ್ರಮಾಣ ಪತ್ರ ನೀಡಿ ಸದರಿ ನಾಲ್ವರು ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಯೋಜನೆಯಡಿಯಲ್ಲಿ ತಲಾ ಒಂದು ಎಕರೆಯಂತೆ ಜಮೀನನ್ನು ನಿಯಮ ಬಾಹಿರವಾಗಿ ನೊಂದಣಿ ಮಾಡಿಸಿಕೊಳ್ಳಲು ಅವಕಾಶ ಕಲ್ಪಿಸಿ ಕೊಟ್ಟು, ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ,

ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (ii) ಮತ್ತು(iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ."

6. The Inquiry Officer (Additional Registrar of Enquiries-16) on proper appreciation of oral and documentary evidence has held that, the above charge against the DGO.1 Sri Venkatappa, DGO-2 Sri Damodar Naik, DGO.4 Sri Sharanappa, and DGO 6 Sri Tukaram Kalyankar, is ' not proved'.

7. Further, the Inquiry Officer (Additional Registrar of Enquiries- 16) has recorded abatement of enquiry against DGO.3 Nooruddin D.Mokashi and DGO.5 Gopalappa Kattimani, in view of their death on 5.6.2018 and 1.8.2020 respectively.

8. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Enquiry Officer and exonerate DGOs 1, 2, 4 & 6 of the charges leveled against them. Further, it is recommended to record abatement of enquiry against DGO.3 Nooruddin D.Mokashi and DGO-5 Gopalappa Kattimani.

9. Action taken in the matter shall be intimated to this Authority.

Connected records are enclosed herewith.

Sd/- 12/11/21

**(JUSTICE B.S.PATIL)**
Upalokayukta,
State of Karnataka.

*BS**

## KARNATAKA LOKAYUKTA

No.UPLOK-1/DE/97/2016/ARE-16
No. UPLOK-1/DE/604/2017/ARE-16
No. UPLOK-1/DE/130/2018/ARE-16

M.S. Building
Dr.B.R. Ambedkar Road
Bengaluru-560 001
Date: 11/11/2021.

## ENQUIRY REPORT

**Present** : H.G. Vijaya Kumari,
Additional Registrar of Enquiries-3
I/c Addl. Registrar of Enquiries-16,
Karnataka Lokayukta,
Bengaluru.

**Sub:** Departmental Enquiry against DGOs in **Enquiry No. 97/2016.**

1) Sri. Venkatappa, the then District Manager, Dr.B.R. Ambedkar Development Corporation Limited, Chitradurga.
2) Sri. Damodar Naik, Retired Assistant District Manager, Dr.B.R. Ambedkar Development Corporation Limited (Ex-parte)
3) Sri. Nooruddin D Mokashi, Taluk Development Officer, Dr.B.R. Ambedkar Development Corporation Limited, Raichur
4) Sri. Sharanappa, PDO, Hirebuduru Grama Panchayathi, Devadurga Taluk, Raichur District.

**Ref**: 1. Government Order No. ಅಂಆನಿ/ಸಿಆ/ಇವಿ/ಲೋಕಾ/2015-16/31395 ಬೆಂಗಳೂರು, ದಿ: 26/03/2016.

2. Government Order No. ಗ್ರಾಅಪ 534 ಗ್ರಾಪಂಕಾ 2015 ಬೆಂಗಳೂರು, ದಿ: 19/21.11.2015.

3. Nomination Order No: UPLOK- 1/ DE/97/2016, Bengaluru, Dated: 11/04/2016 of Hon'ble Upalokayukta, Bengaluru.

**Department Enquiry against DGOs in Enq.No. 604/2017 :**

**Sub:** 1) Sri. Gopalappa Kattimani, District Manager, Dr. B.R. Ambedkar Development Corporation Limited, Karnataka State SC/ST Development Limited, Raichur Presently Manager, Karnataka State Finance Limited, Yadagiri.

**Ref:** 1) Government Order No. ಸಕಇ 464 ಎಸ್‌ಡಿಸಿ 2015 ಬೆಂಗಳೂರು, ದಿ: 20/04/2017.

2) Nomination Order No: UPLOK- 1/ DE/604/2017, Bengaluru, Dated: 27/04/2017 of Hon'ble Upalokayukta, Bengaluru

**Department Enquiry against DGOs in Enq.No. 130/2018 :**

**Sub:** 1) Sri. Tukaram Kalyankar, Under Secretary, Law Department, Karnataka Government Secretariat – Reg.

**Ref:** 1) Government Order No. ಸಿಆಸುಇ 22 ಸೇಇವಿ 2015 ಬೆಂಗಳೂರು, ದಿ: 27/08/2017.

2) Nomination Order No: UPLOK- 1/ DE/130/2018, Bengaluru, Dated: 15/03/2018 of Hon'ble Upalokayukta, Bengaluru.

* * * *

**Preamble:**

This is a Departmental Enquiry directed on the basis of Government Order No. ಅಂಆನಿ/ಸಿಆ/ಇವಿ/ಲೋಕಾ/2015–16/31395 ಬೆಂಗಳೂರು, ದಿ: 26/03/2016 and Government Order No. ಗ್ರಾಅಪ/534/ಗ್ರಾಪಂಕಾ/2015 ಬೆಂಗಳೂರು, ದಿ: 19/21.11.2015 against 1) Sri. Venkatappa, District Manager, Dr. B.R. Ambedkar Development Corporation Limited, Chitradurga District 2) Sri. Damodar Naik, Retired Assistant District Manager, Dr. B.R. Ambedkar Development Corporation Limited 3) Sri. Nooruddin D. Mokashi, Taluk Development Officer, Dr. B.R. Amdedkar Development Corporation Limited, Raichur District and 4) Sri. Sharanappa, Panchayath Development Officer, Hirebudur Grama Panchayathi, Devadurga Taluk,

Raichur District (herein after referred to as Delinquent Government Official in short 'DGOs 1 to 4 respectively') in Uplok-1/DE/97/2016/ARE-16.

2. This is a Departmental Enquiry directed on the basis of Government Order No. ಸಕಇ 464 ಎಸ್.ಡಿ.ಸಿ 2015 ಬೆಂಗಳೂರು, ದಿ: 20/04/2017 against Sri. Gopalappa Kattimani, the then District Manager, Dr. B.R. Ambedkar Development Corporation Limited, Raichur (herein after referred to as Delinquent Government Official in short 'DGO') in Uplok-1/DE/604/2017/ARE-16.

3. This is a Departmental Enquiry directed on the basis of Government Order No. ಸಿಆಸುಇ 22 ಸೇಇವಿ 2015 ಬೆಂಗಳೂರು, ದಿ: 29/08/2017 against Sri. Tukaram Kalyanakar, Under Secretary, Law Department, Karnataka Government Secretariat (herein after referred to as Delinquent Government Official in short 'DGO') in Uplok-1/DE/130/2018/ARE-16.

4. The Hon'ble Upalokayukta has nominated Additional Registrar of Enquiries-4, 5 & 11, office of the Karnataka Lokayukta, Bengaluru to frame the charge and to conduct inquiry against the aforesaid DGOs as per the nomination order dated 11/04/2016, 27/04/2017 & 15/03/2018. Accordingly, Articles of Charge was framed. Vide order No. Uplok-1/DE/2016 Bengaluru dated 3/8/2016 this file is transferred to Additional Registrar of Enquiries -16. Uplok-1/DE/604/2017 and Uplok-1/DE/130/2018 clubbed with Uplok-1/DE/97/2016 vide orders dated 23/9/2017 and 11/9/2019 respectively. Gopalappa Kattimani and Tukaram Kalyankar have been considered as DGOs 5 and 6 respectively in Uplok-1/DE/97/2016.

5. Articles of Charge framed in Uplok-1/DE/97/2016/ARE-16 as against DGO-1 to 3 is as under:

**ಅನುಬಂಧ-1**

**ದೋಷಾರೋಪಣೆ**

2. ಅ.ಸ.ನೌ.1 ರಿಂದ ಅ.ಸ.ನೌ.3 ಆದ ನೀವುಗಳು:

(ಅ) ದೇವದುರ್ಗ ತಾಲ್ಲೂಕು ಬೂದಿನಾಳ ಗ್ರಾಮದ ಶ್ರೀ ಅಮರಪ್ಪ ತಂದೆ ಬೂದೆಪ್ಪಗೌಡ, ಸಾ: ಜಿನ್ನಾಪುರರವರ ಹೆಸರಿನಲ್ಲಿದ್ದ ಸರ್ವೇ ನಂ.34/4ರಲ್ಲಿ 4 ಎಕರೆ

ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 08.03.2013ರಂದು ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಭೂಒಡೆತನ ಯೋಜನೆಯಡಿ ಫಲಾನುಭವಿಗಳಿಗೆ ಖರೀದಿಸಲು ನಿರ್ಣಯ ತೆಗೆದುಕೊಂಡಿರುತ್ತೀರಿ.

(ಆ) ಅ.ಸ.ನೌ.2 ಆದ ನೀವು ದಿನಾಂಕ 03.03.2014ರಂದು ರಾಯಚೂರು ಜಿಲ್ಲಾ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ ಪ್ರಭಾರ ಜಿಲ್ಲಾ ವ್ಯವಸ್ಥಾಪಕರಾಗಿದ್ದು, ಫಲಾನುಭವಿಗಳ ಅರ್ಹತೆಯ ಬಗ್ಗೆ ಪುನರ್‌ಪರಿಶೀಲನೆ ಮಾಡದೇ, ಜಮೀನನ್ನು ಹೊಂದಿದ್ದ ಒಂದೇ ಕುಟುಂಬದವರಾದ ಶ್ರೀಮತಿ ಈರಮ್ಮ ಗಂಡ ಪಾಪಯ್ಯರವರಿಗೆ 1 ಎಕರೆ ಜಮೀನನ್ನು, ಶ್ರೀಮತಿ ಕಾಂತಮ್ಮ ಗಂಡ ಬೂದೆಪ್ಪರವರಿಗೆ 1 ಎಕರೆ ಜಮೀನನ್ನು ಮತ್ತು ಶ್ರೀಮತಿ ರಿಂದಮ್ಮ ಗಂಡ ಬಸಪ್ಪರವರಿಗೆ 1 ಎಕರೆ ಜಮೀನನ್ನು ಹಾಗೂ ತನ್ನ ಮಾವನ ಹೆಸರಿನಲ್ಲಿ ಜಮೀನನ್ನು ಹೊಂದಿದ್ದ ಶ್ರೀಮತಿ ಸಂಗಮ್ಮ ಗಂಡ ಮೂಕಯ್ಯರವರಿಗೆ 1 ಎಕರೆ ಜಮೀನನ್ನು ಬೂದಿನಾಳ ಗ್ರಾಮದ ಸರ್ವೇ ನಂ.34/4ರಲ್ಲಿ ನೋಂದಣಿ ಮಾಡಲು ಪ್ರಮಾಣ ಪತ್ರ ನೀಡಿ ಕರ್ತವ್ಯಲೋಪವೆಸಗಿರುತ್ತೀರಿ.

ಇ) ಅ.ಸ.ನೌ.3 ಆದ ನೀವು ರಾಯಚೂರು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಹೆಚ್ಚುವರಿ ಜಿಲ್ಲಾ ವ್ಯವಸ್ಥಾಪಕರಾಗಿ ಕೆಲಸ ನಿರ್ವಹಿಸುವಾಗ ಫಲಾನುಭವಿಗಳ ಅರ್ಹತೆಯ ಬಗ್ಗೆ ಪುನರ್‌ಪರಿಶೀಲನೆ ಮಾಡದೇ, ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಕಳುಹಿಸುವ ಮೂಲಕ ಕರ್ತವ್ಯಲೋಪವೆಸಗಿರುತ್ತೀರಿ.

ಆದ್ದರಿಂದ, ಅಸನೌ 1 ರಿಂದ ಅಸನೌ 3 ಆದ ನೀವುಗಳು ಸಾರ್ವಜನಿಕ ನೌಕರರಾಗಿ ನಿಮ್ಮ ಕರ್ತವ್ಯ ನಿರ್ವಹಣೆಯಲ್ಲಿ ನಿಷ್ಠೆ ಇಲ್ಲದೆ ಹಾಗೂ ಕರ್ತವ್ಯ ಲೋಪವೆಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ (3) (1) ರಿಂದ (3) ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಮಾಡಿರುತ್ತೀರಿ.

## ಅನುಬಂಧ–2

## ದೋಷಾರೋಪಣೆಯ ವಿವರ (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

3. ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಬೂದಿನಾಳ್ ಗ್ರಾಮದ ಸಮಾಜ ಸೇವಕರಾದ ಶ್ರೀ ಬೂದೆಪ್ಪ ತಂದೆ ಪರಪ್ಪ (ಇನ್ನು ಮುಂದೆ ಸಂಕ್ಷಿಪ್ತವಾಗಿ ದೂರುದಾರರು

ಎಂದು ಕರೆಯಲ್ಪಡುವ) ಇವರು ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಹಿರೇಬೂದೂರು ಗ್ರಾಮ ಪಂಚಾಯಿತಿಯ ಪಂಚಾಯಿತಿ ಹಿಂದಿನ ಅಧ್ಯಕ್ಷೆ ಶ್ರೀಮತಿ ದೇವಮ್ಮ ಮತ್ತು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ರೀ ಶರಣಪ್ಪರವರ ವಿರುದ್ಧ ದೂರು ಸಲ್ಲಿಸುತ್ತಾ, ದೂರಿನೊಂದಿಗೆ ದಿನಾಂಕ 29.04.2014ರಂದು ರಾಯಚೂರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ದೂರಿನ ನಕಲನ್ನು ಲಗತ್ತಿಸಿ ಸೂಕ್ತ ಕ್ರಮಕ್ಕಾಗಿ ಕೋರಿರುತ್ತಾರೆ. ಸದರಿ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ.9ರಡಿ ತನಿಖೆಗೆ ಕೈಗೆತ್ತಿಕೊಂಡಿದ್ದಿದೆ.

2. **ದೂರಿನ ಸಾರಾಂಶ**:- ಜಿನ್ನಾಪುರ ಗ್ರಾಮದ ಅಮರಪ್ಪ ತಂದೆ ಬೂದನಗೌಡ ಎನ್ನುವವರು ಅವರ ಬೂದಿನಾಳ್ ಗ್ರಾಮದ ಸರ್ವೆ ನಂ.34/4ರಲ್ಲಿ 4.14 ಎಕರೆ ಜಮೀನನ್ನು ಭೂಒಡೆತನ ಯೋಜನೆಯಡಿ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ರಾಯಚೂರು ಇವರಿಗೆ ಮಾರಾಟ ಮಾಡಿದ್ದು, ಸದರಿ ಜಮೀನನ್ನು ದಿನಾಂಕ 03.03.2014ರಂದು ಜಮೀನು ಹೊಂದಿರುವ ಒಂದೇ ಕುಟುಂಬದವರಾದ ಈರಮ್ಮ ಗಂಡ ಪಾಪಯ್ಯ, ಕಾಂತಮ್ಮ ಗಂಡ ಬೂದೆಪ್ಪ, ರಿಂದಮ್ಮ ಗಂಡ ಬಸವರಾಜ ರವರಿಗೂ ಮತ್ತು ಸಂಗಮ್ಮ ಗಂಡ ಮೂಕಯ್ಯ ಇಲಿಯಾಸ್ ಬಸಪ್ಪ ರವರಿಗೆ ನೋಂದಣಿ ಮಾಡಿಸಿರುತ್ತಾರೆ. ಪ್ರಥಮ ಹಂತದಲ್ಲಿ ದೇವದುರ್ಗ ತಹಶೀಲ್ದಾರರು ಪಾಪಯ್ಯನ ಹೆಂಡತಿ ಈರಮ್ಮ, ಅವರ ಸೊಸೆಯಂದಿರಾದ ಕಾಂತಮ್ಮ ಮತ್ತು ರಿಂದಮ್ಮರವರ ಕುಟುಂಬಕ್ಕೂ ಮತ್ತು ಮೂಕಯ್ಯ ಹೆಂಡತಿ ಸಂಗಮ್ಮರವರಿಗೂ ಜಮೀನಿದ್ದು, ಭೂಒಡೆತನ ಯೋಜನೆಯಡಿ ಜಮೀನು ಪಡೆಯಲು ಅರ್ಹರಲ್ಲವೆಂದು ದಿನಾಂಕ 27.07.2013ರಂದು ಪ್ರಮಾಣ ಪತ್ರ ನೀಡಿದ್ದು, ನಂತರ ಭೂಮಾಲೀಕರು ಹಾಗೂ ಮಧ್ಯವರ್ತಿಗಳು ಸೇರಿ ಪ್ರತಿ ಫಲಾನುಭವಿಗಳಿಂದ ರೂ.1.00 ಲಕ್ಷದಂತೆ ಅಕ್ರಮ ಸಂಭಾವನೆ ಪಡೆದು, ಬೂದಿನಾಳ್ ಗ್ರಾಮದಲ್ಲಿ 35 ಪರಿಶಿಷ್ಟ ಜಾತಿಯ ಕುಟುಂಬಗಳು ಮತ್ತು 8 ಪರಿಶಿಷ್ಟ ಪಂಗಡಗಳ ಕುಟುಂಬಗಳಿದ್ದಾಗ್ಯೂ ಸಹ, ಪುನ: ದೇವದುರ್ಗ ತಹಶೀಲ್ದಾರರು ಅದೇ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಡಲು ಅವರುಗಳು ದೇವದುರ್ಗ ತಾಲ್ಲೂಕು ವ್ಯಾಪ್ತಿಯಲ್ಲಿ ಯಾವುದೇ ಕೃಷಿ ಜಮೀನು ಹೊಂದಿರುವುದಿಲ್ಲವೆಂದು ದಿನಾಂಕ 02.08.2013 ರಂದು ದೃಢೀಕರಣ ಪತ್ರ ನೀಡಿದ್ದು. ಸದರಿ ಸುಳ್ಳು ದೃಢೀಕರಣ ಪತ್ರದನುಸಾರ ಸದರಿ ಫಲಾನುಭವಿಗಳಿಗೆ ದಿನಾಂಕ 03.03.2014ರಂದು ಭೂಒಡೆತನ ಯೋಜನೆಯಡಿ ಕ್ರಯಪತ್ರ ನೋಂದಣಿ ಮಾಡಿಸಿಕೊಟ್ಟಿದ್ದು, ಗ್ರಾಮ ಪಂಚಾಯಿತಿಯ ಪಂಚಾಯಿತಿ ಹಿಂದಿನ ಅಧ್ಯಕ್ಷೆ ಶ್ರೀಮತಿ ದೇವಮ್ಮ ಮತ್ತು ಶ್ರೀ ಶರಣಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

3. ಪ್ರಸ್ತುತ ದೂರಿನಲ್ಲಿ ಗ್ರಾಮ ಪಂಚಾಯಿತಿಯ ಪಂಚಾಯಿತಿಯ ಹಿಂದಿನ ಅಧ್ಯಕ್ಷೆ ಶ್ರೀಮತಿ ದೇವಮ್ಮ ಮತ್ತು ಶ್ರೀ ಶರಣಪ್ಪ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿರವರ ಆಕ್ಷೇಪಣೆ ಕೇಳಲಾಗಿ, ಅವರಿಬ್ಬರೂ ಒಂದೇ ತೆರನಾದ ಆಕ್ಷೇಪಣೆಯನ್ನು ಸಲ್ಲಿಸುತ್ತಾ, ದೂರುದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ದೂರುದಾರರು ಬಳಸಿರುವ ಪಂಚಾಯಿತಿಯ ಲೆಟರ್ ಪ್ಯಾಡ್ ಮತ್ತು ತಮ್ಮಿಬ್ಬರ ಸಹಿಗಳನ್ನು ಫೋರ್ಜರಿ ಮಾಡಿದ್ದು, ದಿನಾಂಕ 16.08.2013 ರಂದು ತಮ್ಮ ಪಂಚಾಯಿತಿಯಲ್ಲಿ ಯಾವುದೇ ಗ್ರಾಮಸಭೆಯನ್ನು ಕೈಗೊಂಡಿರುವುದಿಲ್ಲ ಮತ್ತು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ರಾಯಚೂರು ವತಿಯಿಂದ ದಿನಾಂಕ 16.08.2013ರಂದು ತಮ್ಮ ಪಂಚಾಯಿತಿಗೆ ಯಾವುದೇ ಪತ್ರವನ್ನು ರವಾನಿಸಿಲ್ಲವೆಂತಲೂ, ಅದಕ್ಕನುಸಾರವಾಗಿ ತಮ್ಮ ಪಂಚಾಯಿತಿಯಲ್ಲಿ ದಿನಾಂಕ 16.08.2013ರಂದು ಯಾವುದೇ ಗ್ರಾಮಸಭೆ ಮಾಡಿಲ್ಲ ಮತ್ತು ಅಂತಹ ಗ್ರಾಮಸಭೆಯ ಮುಖಾಂತರ ಫಲಾನುಭವಿಗಳ ಆಯ್ಕೆಪಟ್ಟಿಯನ್ನು ಅಭಿವೃದ್ಧಿ ನಿಗಮಕ್ಕೆ ರವಾನಿಸಿಲ್ಲವೆಂತಲೂ, ಆದರೆ, ದಿನಾಂಕ 03.09.2014ರಂದು ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಪತ್ರ ಬಂದಿದ್ದು, ನಿಗಮವು ಫಲಾನುಭವಿಗಳ ಆಯ್ಕೆ ಮಾಡಲು ಸೂಚಿಸಿರುತ್ತದೆ, ಖೊಟ್ಟಿ ಲೆಟರ್ ಪ್ಯಾಡ್ ಮತ್ತು ಸಹಿ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಲು ದೂರು ಸಲ್ಲಿಸಲಾಗಿದ್ದು, ತಮ್ಮಿಬ್ಬರನ್ನು ದೋಷಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ.

4. ತನಿಖಾದಿಕಾರಿಗಳ ದೂರನ್ನು ನಮ್ಮ ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ರಾಯಚೂರು ಪೋಲೀಸ್ ಅಧೀಕ್ಷಕರಿಗೆ ಕಳಿಸಿ ತನಿಖೆ ಮಾಡಿ ವರದಿ ನೀಡುವಂತೆ ಹೇಳಲಾಗಿ, ಅವರು ಅವರ ಅಧೀನ ಅಧಿಕಾರಿ ಪೋಲೀಸ್ ಉಪಾಧೀಕ್ಷಕರಿಗೆ (ಇನ್ನು ಮುಂದೆ ಸಂಕ್ಷಿಪ್ತವಾಗಿ ತನಿಖಾಧಿಕಾರಿ ಎಂದು ಕರೆಯಲ್ಪಡುವ) ತನಿಖೆ ಮಾಡಿ ವರದಿ ನೀಡಲು ಸೂಚಿಸಿದ್ದು, ತನಿಖಾಧಿಕಾರಿಗಳು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕರು ಬೂದಿನಾಳ್ ಗ್ರಾಮದ ಸರ್ವೇ ನಂ.34/4ರ 4.14 ಎಕರೆ ಜಮೀನನ್ನು ಭೂಮಾಲೀಕರಿಂದ ನೇರವಾಗಿ ಭೂಒಡೆತನ ಯೋಜನೆಯಡಿ ಈಗಾಗಲೇ ಜಮೀನು ಹೊಂದಿರುವ ಬೂದಿನಾಳ್ ಗ್ರಾಮದ ಪಾಪಯ್ಯನವರ ಹೆಂಡತಿ ಶ್ರೀಮತಿ ಈರಮ್ಮ, ಅವರ ಸೊಸೆಯಂದಿರಾದ ಶ್ರೀಮತಿ ಕಾಂತಮ್ಮ ಮತ್ತು ರಿಂದಮ್ಮ ರವರಿಗೂ ಹಾಗೂ ಅದೇ ಗ್ರಾಮದಲ್ಲಿ ಜಮೀನು ಹೊಂದಿದ್ದ ಮೂಕಯ್ಯ ಅಲಿಯಾಸ್ ಬಸಪ್ಪ ರವರ ಹೆಂಡತಿ ಶ್ರೀಮತಿ ಸಂಗಮ್ಮರವರಿಗೂ ದಿನಾಂಕ 03.03.2014ರಂದು

ಕ್ರಯಪತ್ರ ಮಾಡಿಸಿರುತ್ತಾರೆ ಎಂತಲೂ, ದಿನಾಂಕ 30.12.2014ರಂದು ತಹಶೀಲ್ದಾರ್‌ರು ತನಿಖೆಗೆ ಒದಗಿಸಿಕೊಟ್ಟ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಲಾಗಿ, ಫಲಾನುಭವಿ ಶ್ರೀಮತಿ ಈರಮ್ಮರವರ ಗಂಡ ಪಾಪಯ್ಯರವರು ಬೂದಿನಾಳ್ ಸೀಮಾಂತರದ ಸರ್ವೇ ನಂ.110ರಲ್ಲಿ 2 ಎಕರೆ ಜಮೀನನ್ನು ಹೊಂದಿದ್ದು, ಫಲಾನುಭವಿಗಳಾದ ಶ್ರೀಮತಿ ಕಾಂತಮ್ಮ ಮತ್ತು ಶ್ರೀಮತಿ ರಿಂದಮ್ಮರವರು ಪಾಪಯ್ಯನವರ ಸೊಸೆಯಂದಿರಾಗಿದ್ದು ಒಂದೇ ಕುಟುಂಬದವರೆಂತಲೂ, ಶ್ರೀಮತಿ ಸಂಗಮ್ಮರವರ ಗಂಡ ಬಸಪ್ಪರವರು ಸಹ ಹದ್ದಿನಾಳು ಗ್ರಾಮದ ಸರ್ವೇ ನಂ.55/ಅ ರಲ್ಲಿ 37 ಗುಂಟೆ ಮತ್ತು 55/ಆ ರಲ್ಲಿ 38 ಗುಂಟೆ ಜಮೀನು ಹೊಂದಿದ್ದು, ಆ ಪ್ರಕಾರ 4ನೇ ಎದುರುದಾರರು ಸದರಿ ಫಲಾನುಭವಿಗಳು ಭೂಒಡೆತನ ಯೋಜನೆಯಡಿ ಜಮೀನು ಹೊಂದಲು ಅರ್ಹರಲ್ಲವೆಂದು ದಿನಾಂಕ 27.07.2013ರಂದು ಹಿಂಬರಹ ನೀಡಿದ್ದು, ನಂತರ ಅದೇ ಫಲಾನುಭವಿಗಳಿಗೆ ದಿನಾಂಕ 02.08.2013ರಂದು ಸದರಿ ಫಲಾನುಭವಿಗಳು ದೇವದುರ್ಗ ತಾಲ್ಲೂಕು ಗಬ್ಬೂರು ಹೋಬಳಿ ವ್ಯಾಪ್ತಿಯಲ್ಲಿ ಯಾವುದೇ ಕೃಷಿ ಜಮೀನು ಹೊಂದಿಲ್ಲವೆಂದು ಸುಳ್ಳು ಪ್ರಮಾಣ ಪತ್ರ ನೀಡಿದ್ದು, ಸಂಬಂಧಪಟ್ಟ ಅಧಿಕಾರಿಗಳು ಸ್ಥಳೀಯವಾಗಿ ಫಲಾನುಭವಿಗಳ ಆಯ್ಕೆಯ ಕಾಲಕ್ಕೆ ಫಲಾನುಭವಿಗಳ ಕುಟುಂಬ, ಜಮೀನು ಹೊಂದಿರುವ ಬಗ್ಗೆ ಮತ್ತು ಅವರು ನಿಗಮದ ನಿಯಮದನುಸಾರ ಅನರ್ಹರಾಗಿರುವ ಬಗ್ಗೆ ತನಿಖೆ ಮಾಡದೇ ಈ 4 ಫಲಾನುಭವಿಗಳನ್ನು ಆಯ್ಕೆ ಮಾಡಿ ದಿನಾಂಕ 03.03.2014ರಂದು ಪ್ರತಿ ಫಲಾನುಭವಿಗೆ 1 ಎಕರೆಯಂತೆ ಯೋಜನೆಯಡಿ ಜಮೀನನ್ನು ನೋಂದಣಿ ಮಾಡಿಸಿಕೊಟ್ಟಿದ್ದು, ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬಹುದಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ.

5. ತನಿಖಾಧಿಕಾರಿಗಳ ವರದಿಯನ್ನಾಧರಿಸಿ ಅ.ಸ.ನೌ.1, 2 ಮತ್ತು 3 ಮತ್ತು ಇತರ ಅಧಿಕಾರಿಗಳನ್ನು ಸೇರ್ಪಡೆ ಮಾಡಿಕೊಂಡು, ತನಿಖಾ ವರದಿಗೆ ಮೇಲ್ಕಂಡವರಿಂದ ಆಕ್ಷೇಪಣೆಗಳನ್ನು ಕೇಳಲಾಗಿತ್ತು.

6. (ಅ) ಹಿಂದಿನ ಅಧ್ಯಕ್ಷೆ ಶ್ರೀಮತಿ ದೇವಮ್ಮ ಇವರಿಗೆ ನೋಟೀಸ್ ಜಾರಿಯಾದಾಗ್ಯೂ ಸಹ ಅವರು ತನಿಖಾ ವರದಿಗೆ ಯಾವುದೇ ಉತ್ತರ ನೀಡಿಲ್ಲ;

(ಆ) ಶ್ರೀ ಶರಣಪ್ಪ, ಪಿ.ಡಿ.ಓ ಇವರು ದಿನಾಂಕ 08.09.2014ರಂದು ದೂರಿಗೆ ಸಲ್ಲಿಸಿದ ಆಕ್ಷೇಪಣೆಯನ್ನು ಪುನರುಚ್ಚರಿಸುತ್ತಾ, ಅದೇ ಪ್ರಕಾರ ದಿನಾಂಕ 23.12.2014ರಂದು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುವುದಾಗಿಯೂ, ದೂರುದಾರರು ಪಂಚಾಯಿತಿ

ವತಿಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಖೊಟ್ಟಿ/ಪೋರ್ಜರಿ ದಾಖಲೆಗಳನ್ನು ಸೃಷ್ಟಿಸಿದ್ದಾರೆಂದು ಹೇಳಿಕೆ ನೀಡಿದ್ದು, ತನ್ನನ್ನು ಆಪಾದನೆಯಿಂದ ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ;

(ಇ) ಶ್ರೀ ತುಕಾರಾಂ ಕಲ್ಯಾಣ್‌ಕರ್ ಹಿಂದಿನ ತಹಶೀಲ್ದಾರ್, ದೇವದುರ್ಗ ಇವರು ತಮ್ಮ ಆಕ್ಷೇಪಣೆಯಲ್ಲಿ ತನಿಖಾಧಿಕಾರಿಗಳು ದೇವದುರ್ಗ ತಹಶೀಲ್ದಾರರು 4 ಜನ ಫಲಾನುಭವಿಗಳಿಗೆ ಸುಳ್ಳು ದಾಖಲೆಗಳನ್ನು ನೀಡಿರುತ್ತಾರೆಂದು ಆಪಾದನೆ ಮಾಡಿಲ್ಲವಾಗಿದ್ದು, ತಾವು ದಿನಾಂಕ 17.05.2013ರಿಂದ 02.09.2013ರವರೆಗೆ ದೇವದುರ್ಗ ತಾಲ್ಲೂಕಿನ ತಹಶೀಲ್ದಾರ್‌ರೆಂದು ನಿಯೋಜನೆಗೊಂಡಿದ್ದು, ದೂರುದಾರರು ಸಹ ದಿನಾಂಕ 29.04.2014ರಂದು ಜಿಲ್ಲಾಧಿಕಾರಿಗಳಿಗೆ ಬರೆದಿರುವ ದೂರಿನಲ್ಲಿ ತಮ್ಮ ವಿರುದ್ಧ ಆಪಾದನೆ ಮಾಡಿಲ್ಲವಾಗಿದ್ದು, ಜಿಲ್ಲಾಧಿಕಾರಿಗಳು ಸಹ ಅವರ ಪತ್ರ ಸಂಖ್ಯೆ: ಎಂಎಜಿ/716:2013-14, ದಿನಾಂಕ 29.04.2014ರೊಂದಿಗೆ 34 ಪುಟಗಳ ದಾಖಲೆಗಳನ್ನು ಲಗತ್ತಿಸಿ ಕಳುಹಿಸಿ, ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಿಗರ ವಿರುದ್ಧ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ತಾವು ಸದರಿ 4 ಫಲಾನುಭವಿಗಳ ಅರ್ಜಿಗಳನ್ನು ದಿನಾಂಕ 24.07.2013ರಂದು ತಿರಸ್ಕರಿಸಿ ಹಿಂಬರಹ ನೀಡಲು ಆದೇಶಿಸಿದ್ದು, ನಂತರ ಅಟಲ್‌ಜೀ ಜನಸ್ನೇಹಿ ಕೇಂದ್ರದ ಕಂಪ್ಯೂಟರ್ ಆಪರೇಟರ್ ತಮ್ಮ ಡಿಜಿಟಲ್ ಕಾರ್ಡ್‌ನ್ನು ಅನಧಿಕೃತವಾಗಿ ಬಳಸಿಕೊಂಡು, ಅದೇ ಫಲಾನುಭವಿಗಳಿಗೆ ದೇವದುರ್ಗ ತಾಲ್ಲೂಕು ಗಬ್ಬೂರು ಹೋಬಳಿಯಲ್ಲಿ ಯಾವುದೇ ಕೃಷಿ ಜಮೀನು ಹೊಂದಿಲ್ಲವೆಂದು ಸುಳ್ಳು ಪ್ರಮಾಣ ಪತ್ರ ನೀಡಿರುತ್ತಾರೆಂದು, ಸದರಿ ಕಂಪ್ಯೂಟರ್ ಆಪರೇಟರ್ ವಿರುದ್ಧ ತಮ್ಮ ದಿನಾಂಕ 31.12.2014ರ ಪತ್ರದನುಸಾರ ಕ್ರಮ ಕೈಗೊಳ್ಳುವಂತೆ ಸಹಾಯಕ ಆಯುಕ್ತರಿಗೆ ಪತ್ರ ಬರೆದು ತಿಳಿಸಿರುವುದಾಗಿ, ಸದರಿ ಅನಧಿಕೃತವಾಗಿ ನೀಡಿದ ಅರ್ಹತಾ ಪತ್ರಗಳನ್ನು ಪೂರ್ವಾನ್ವಯ ದಿನಾಂಕ 02.08.2013ರಿಂದಲೇ ಜಾರಿಗ ಬರುವಂತೆ ರದ್ದುಪಡಿಸಲಾಗಿದೆ ಎಂತಲೂ, ತನ್ನನ್ನು ತನಿಖೆಯಿಂದ ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ;

(ಈ) ಶ್ರೀ ಗೋಪಾಲಪ್ಪ ಕಟ್ಟಿಮನಿ ಹಿಂದಿನ ಜಿಲ್ಲಾ ವ್ಯವಸ್ಥಾಪಕರಾದ ಇವರು ತಾವು ದಿನಾಂಕ 22.06.2013ರಂದು ರಾಯಚೂರಿನ ನಿಗಮದಿಂದ ಗುಲ್ಬರ್ಗಾಕ್ಕೆ ವರ್ಗಾವಣೆಯಾಗಿದ್ದು, ತನ್ನ ನಂತರದ ವ್ಯವಸ್ಥಾಪಕರು ಮುಂದಿನ ಕ್ರಮ ಕೈಗೊಂಡು ದಿನಾಂಕ 03.03.2014ರಂದು ಸದರಿ ಫಲಾನುಭವಿಗಳಿಗೆ ತಲಾ 1 ಎಕರೆಯಂತೆ ಜಮೀನು ನೋಂದಣಿ ಮಾಡಿಸಿಕೊಟ್ಟಿದ್ದು, ದಿನಾಂಕ 15.04.2013ರಂದು ಹಿರೇಬೂದನೂರು ಗ್ರಾಮ ಪಂಚಾಯಿತಿಗೆ ಪರಿಶಿಷ್ಟ ಜಾತಿ/ಪಂಗಡದ

ಫಲಾಪೇಕ್ಷಿಗೆ ಆಯ್ಕೆಪಟ್ಟಿ ಕೇಳಿದ್ದು, ಆ ಪ್ರಕಾರ ಒಂದು ಗ್ರಾಮಸಭೆ ನಡೆಸಿ ದಿನಾಂಕ 16.08.2013ರಂದು ಫಲಾಪೇಕ್ಷಿಗಳ ಪಟ್ಟಿಯನ್ನು ಕೊಟ್ಟಿದ್ದು, ದಿನಾಂಕ 22.06.2013ರಂದು ತಾವು ವರ್ಗಾವಣೆ ಹೊಂದಿದ್ದು, ಸದರಿ ಪಟ್ಟಿಯನ್ನು ದಿನಾಂಕ 08.03.2013ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯಲ್ಲಿ ಮಂಡಿಸಿ, ಅನುಮೋದನೆ ಪಡೆದಿದ್ದು, ತಮ್ಮ ನಂತರ ಜಿಲ್ಲಾ ವ್ಯವಸ್ಥಾಪಕರು ದಿನಾಂಕ 04.09.2013ರಂದು ಅನುಮೋದನೆಗಾಗಿ ಕೇಂದ್ರ ಕಛೇರಿಗೆ ಸಲ್ಲಿಸಿದ್ದು, ನಂತರ ಗುಲ್ಬರ್ಗಾದ ಉಪ ಪ್ರಧಾನ ವ್ಯವಸ್ಥಾಪಕರು ದಿನಾಂಕ 03.03.2014ರಂದು ಫಲಾನುಭವಿಗಳಿಗೆ ಜಮೀನನ್ನು ನೋಂದಣಿ ಮಾಡಿಕೊಡಿಸಿದ್ದು, ತಮ್ಮನ್ನು ತನಿಖೆಯಿಂದ ಕೈಬಿಡಬೇಕೆಂದು ಕೋರಿಕೊಂಡಿರುತ್ತಾರೆ;

(ಉ) ಅ.ಸ.ನೌ.3 ಇವರು ಭೂಒಡೆತನ ಯೋಜನೆಯ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ, ಭೂಮಾಲೀಕರ ದಾಖಲಾತಿಗಳು, ಜಮೀನು, ಫಲಾಪೇಕ್ಷಿಗಳ ದಾಖಲಾತಿಗಳು ಮತ್ತು ಸ್ಥಳ ಪರಿಶೀಲಿಸಿ, ಅವರ ಅರ್ಹತೆಯ ಬಗ್ಗೆ ಸಂಬಂಧಪಟ್ಟ ತಾಲ್ಲೂಕಿನ ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಮತ್ತು ಜಿಲ್ಲಾ ವ್ಯವಸ್ಥಾಪಕರು ಪೂರ್ಣ ಮಾಹಿತಿ ಸಂಗ್ರಹಿಸಿ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಗೆ ಪ್ರಸ್ತಾವನೆಯನ್ನು ಮಂಡಿಸಿದ್ದು, ಅದರಂತೆ ಅಮರಪ್ಪ ತಂದೆ ಬೂದೆಪ್ಪ, ಸಾ: ಜಿನ್ನಾಪುರ ರವರ ಬೂದಿನಾಳ ಗ್ರಾಮದ ಸರ್ವೇ ನಂ.34/ಅ ದ 4 ಎಕರೆ ವಿಸ್ತೀರ್ಣವನ್ನು ಖರೀದಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿ ದಿನಾಂಕ 08.03.2013ರಂದು ನಡೆದ ಸಮಿತಿ ಅನುಮೋದಿಸಿದ್ದು, ತಾವು ಸದರಿ ಜಮೀನನ್ನು ದಿನಾಂಕ 06.09.2013ರಂದು ಪುನರ್‌ಪರಿಶೀಲಿಸಿದ್ದು, ಕೃಷಿಗೆ ಯೋಗ್ಯವಾಗಿದ್ದ ಕಾರಣ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಗೆ ವರದಿ ನೀಡಿದ್ದು, ಮಾನ್ಯ ವ್ಯವಸ್ಥಾಪಕರು ತಮ್ಮ ಮತ್ತು ಜಿಲ್ಲಾ ವ್ಯವಸ್ಥಾಪಕರ ವರದಿಗಳನ್ನು ಪರಿಶೀಲಿಸಿ ದಿನಾಂಕ 30.09.2013ರಂದು ಪ್ರಸ್ತಾವನೆಗೆ ಮಂಜೂರಾತಿ ನೀಡಿರುತ್ತಾರೆ. ಫಲಾಪೇಕ್ಷಿಗಳ ಅರ್ಹತೆಯ ಬಗ್ಗೆ ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ ಅಧಿಕಾರಿಗಳು ಮತ್ತು ಜಿಲ್ಲಾ ವ್ಯವಸ್ಥಾಪಕರು ಪೂರ್ಣವಾಗಿ ಪರಿಶೀಲಿಸಿ, ಅನುಷ್ಠಾನ ಸಮಿತಿಗೆ ಪ್ರಸ್ತಾವನೆ ಮಂಡಿಸಬೇಕಾಗಿದ್ದು, ತಾವು ಕೇವಲ ಪ್ರಸ್ತಾವಿತ ಜಮೀನು ಕೃಷಿಗೆ ಯೋಗ್ಯವಾಗಿದೆಯೇ ಎಂಬ ಬಗ್ಗೆ ಮಾತ್ರ ವರದಿಯನ್ನು ನೀಡಿದ್ದು, ದೂರಿಗೆ ಸಂಬಂಧಪಟ್ಟ ಆಪಾದನೆಯಲ್ಲಿ ತನ್ನದೇನು ಪಾತ್ರವಿಲ್ಲವಾಗಿದ್ದು, ತನಿಖೆಯಿಂದ ತನ್ನನ್ನು ಕೈಬಿಡಬೇಕೆಂದು ಕೋರಿರುತ್ತಾರೆ;

(ಊ) ಅ.ಸ.ನೌ.1 ಇವರು ಹಿರೇಬೂದನೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ದಿನಾಂಕ 16.08.2013ರಂದು ಗ್ರಾಮಸಭೆಯ ಮೂಲಕ 4 ಭೂರಹಿತ ಕೃಷಿ ಮಹಿಳಾ

ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ದಿನಾಂಕ 12.02.2013ರಂದು ತಾಲ್ಲೂಕು ಅಭಿವೃದ್ಧಿ ಅಧಿಕಾರಿ ಶ್ರೀ ಎನ್.ಡಿ.ಮೊಕಾಶಿ ಮತ್ತು ಜಿಲ್ಲಾ ವ್ಯವಸ್ಥಾಪಕರಾಗಿದ್ದ ಶ್ರೀ ಕಟ್ಟಿಮನಿಯವರು, ತಹಶೀಲ್ದಾರ್ ದೇವದುರ್ಗದವರು ಸದರಿ ಫಲಾಪೇಕ್ಷಿಗಳಿಗೆ ಭೂರಹಿತ ಕೃಷಿ ಕಾರ್ಮಿಕರೆಂದು ನೀಡಿದ ದೃಢೀಕೃತ ಪತ್ರವನ್ನಾಧರಿಸಿ, ನೀಡಿದ್ದ ದಾಖಲೆಗಳನ್ನಾಧರಿಸಿ ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಸಲ್ಲಿಸಿದ್ದು, ನಂತರದ ಪ್ರಭಾರ ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ದಾಮೋದರ್ ನಾಯಕ್ ರವರು ಕೇಂದ್ರ ಕಛೇರಿಯಿಂದ ಹಣ ಬಿಡುಗಡೆ ಮಾಡಿಸಿಕೊಂಡು, ಫಲಾನುಭವಿಗಳಿಗೆ ಜಮೀನು ನೋಂದಾಯಿಸಿದ್ದು, ಪ್ರಕರಣದಲ್ಲಿ ತನ್ನದೇನು ತಪ್ಪಿಲ್ಲವಾಗಿದ್ದು ತಮ್ಮ ಹೆಸರನ್ನು ತನಿಖೆಯಿಂದ ಕೈಬಿಡಬೇಕೆಂದು ಕೋರಿರುತ್ತಾರೆ;

(ಖ) ಅ.ಸ.ನೌ.3 ಇವರು ಫಲಾನುಭವಿಗಳಿಗೆ ಕ್ರಯಪತ್ರ ನೋಂದಣಿ ಮಾಡಿಸಿಕೊಡುವ ಕಾಲಕ್ಕೆ ತಾವು ನಿಗಮದ ರಾಯಚೂರು ಕಛೇರಿಯಲ್ಲಿ ಪ್ರಭಾರಿ ಜಿಲ್ಲಾ ವ್ಯವಸ್ಥಾಪಕರಾಗಿದ್ದು, ಆ ಕಾಲಕ್ಕೆ ತಾವು ನಿವೃತ್ತಿಯ ಅಂಚಿನಲ್ಲಿದ್ದುದಾಗಿಯೂ ಕಡತವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಲು ಕಡತವು ತನ್ನ ಗಮನಕ್ಕೆ ಬರದೇ, Oversight ಆಗಿ ಫಲಾನುಭವಿಗಳ ಹೆಸರಿಗೆ ಜಮೀನು ನೋಂದಣಿ ಮಾಡಲು ಉಪನೋಂದಣಾಧಿಕಾರಿಗಳಿಗೆ ಪ್ರಮಾಣ ಪತ್ರ ನೀಡಿರುವುದು ತನ್ನಿಂದ ಏನಾದರೂ ದೋಷವಾಗಿದ್ದಲ್ಲಿ ತನ್ನನ್ನು ಕ್ಷಮಿಸಬೇಕೆಂದು ಕೋರಿರುತ್ತಾರೆ;

(ಎ) ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಅವರ ಆಕ್ಷೇಪಣೆಯಲ್ಲಿ ಅಂದಿನ ನಿಗಮದ ಜಿಲ್ಲಾ ವ್ಯವಸ್ಥಾಪಕರಾಗಿದ್ದ ಶ್ರೀ ಗೋಪಾಲಪ್ಪ ಕಟ್ಟಿಮನಿ ಮತ್ತು ಗುಲ್ಬರ್ಗಾ ಉಪವಿಭಾಗದ ಪ್ರಧಾನ ವ್ಯವಸ್ಥಾಪಕರಾಗಿದ್ದ ಶ್ರೀ ಚಂದ್ರಕಾಂತ್ ರವರ ಆದೇಶಾನುಸಾರ ಬೂದಿನಾಳ ಗ್ರಾಮದ ಸರ್ವೇ ನಂ.34/ಅ ಜಮೀನನ್ನು ಜಂಟಿಯಾಗಿ ದಿನಾಂಕ 12.02.2013ರಂದು ಪರಿಶೀಲನೆ ಮಾಡಿದ್ದು, ನಂತರ ಜಿಲ್ಲಾ ವ್ಯವಸ್ಥಾಪಕರು ತಮ್ಮ ಅಧಿಕಾರವನ್ನು ಬಳಸಿ ಸದರಿ ಜಮೀನನ್ನು ಭೂಒಡೆತನ ಯೋಜನೆಗೆ ಖರೀದಿಸುವ ನಿರ್ಣಯ ತೆಗೆದುಕೊಂಡಿದ್ದು, ತನ್ನನ್ನು ಆಪಾದನೆಯಿಂದ ಮುಕ್ತಗೊಳಿಸಬೇಕೆಂದು ಕೋರಿರುತ್ತಾರೆ.

8. <u>ಕಡತದ ಕೂಲಂಕಷ ಪರಿಶೀಲನೆಯಿಂದ ಕಂಡುಬಂದ ಅಂಶ (ನ್ಯೂನತೆ) ಗಳೆಂದರೆ:</u>-

(ಅ) 2013ನೇ ಇಸವಿಯಲ್ಲಿ ಶ್ರೀಮತಿ ದೇವಮ್ಮ, ದೇವದುರ್ಗ ತಾಲ್ಲೂಕಿನ ಹಿರೇಬೂದನೂರು ಗ್ರಾಮ ಪಂಚಾಯಿತಿಯ ಹಿಂದಿನ ಅಧ್ಯಕ್ಷೆ ಮತ್ತು ಶ್ರೀ ಶರಣಪ್ಪ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾಗಿದ್ದು, ಶ್ರೀ ತುಕಾರಾಂ ಕಲ್ಯಾಣ್‌ಕರ್ ಹಿಂದಿನ ತಹಶೀಲ್ದಾರ್, ಇವರು ರಾಯಚೂರು ಜಿಲ್ಲಾ ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ ಜಿಲ್ಲಾ ವ್ಯವಸ್ಥಾಪಕರಾಗಿದ್ದು,

ಅ.ಸ.ನೌ.1 ರವರು ಆ ಕಾಲಕ್ಕೆ ಗುಲ್ಬರ್ಗಾದ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ ಉಪ ಪ್ರಧಾನ ವ್ಯವಸ್ಥಾಪಕರಾಗಿದ್ದು, ಅ.ಸ.ನೌ.2 ಇವರು ಶ್ರೀ ಗೋಪಾಲಪ್ಪ ಕಟ್ಟಿಮನಿ ನಂತರ ರಾಯಚೂರು ಜಿಲ್ಲಾ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ ಜಿಲ್ಲಾ ವ್ಯವಸ್ಥಾಪಕರಾಗಿದ್ದು, ಅ.ಸ.ನೌ.3 ಇವರು ಅ.ಸ.ನೌ.2ರವರ ನಂತರ ರಾಯಚೂರು ಜಿಲ್ಲೆಯ ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ ಪ್ರಭಾರ ಜಿಲ್ಲಾ ವ್ಯವಸ್ಥಾಪಕರಾಗಿದ್ದು, ದೇವದುರ್ಗ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ ದೇವದುರ್ಗ ತಾಲ್ಲೂಕು ಅಭಿವೃದ್ಧಿ ಅಧಿಕಾರಿಯಾಗಿರುತ್ತಾರೆ;

ಆ) ಶ್ರೀ ತುಕಾರಾಂ ಕಲ್ಯಾಣ್‌ಕರ್ ಹಿಂದಿನ ತಹಶೀಲ್ದಾರ್ ಇವರನ್ನು ಹೊರತುಪಡಿಸಿ, ಅ.ಸ.ನೌ 1 ರಿಂದ 3 ಮತ್ತು ಮೇಲ್ಕಂಡ ಅಧಿಕಾರಿಗಳು, ದೇವದುರ್ಗ ತಾಲ್ಲೂಕು ಬೂದಿನಾಳ ಗ್ರಾಮದ ಶ್ರೀ ಅಮರಪ್ಪ ತಂದೆ ಬೂದೆಪ್ಪಗೌಡ, ಸಾ: ಜಿನ್ನಾಪುರರವರ ಹೆಸರಿನಲ್ಲಿದ್ದ ಸರ್ವೇ ನಂ.34/4ರಲ್ಲಿ 4 ಎಕರೆ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 08.03.2013ರಂದು ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಭೂಒಡೆತನ ಯೋಜನೆಯಡಿ ಫಲಾನುಭವಿಗಳಿಗೆ ಖರೀದಿಸಲು ನಿರ್ಣಯಿಸಿರುತ್ತಾರೆ;

ಇ) ಶ್ರೀ ತುಕಾರಾಂ ಕಲ್ಯಾಣ್‌ಕರ್ ಹಿಂದಿನ ತಹಶೀಲ್ದಾರ್, ಆ ಕಾಲಕ್ಕೆ ದೇವದುರ್ಗ ತಾಲ್ಲೂಕಿನ ತಹಶೀಲ್ದಾರರಾಗಿದ್ದು, ಫಲಾನುಭವಿಗಳು ಎನ್ನಲಾದ ಶ್ರೀಮತಿ ಈರಮ್ಮ ಗಂಡ ಪಾಪಯ್ಯ, (2) ಶ್ರೀಮತಿ ಕಾಂತಮ್ಮ ಗಂಡ ಬೂದೆಪ್ಪ ಪಾಪಯ್ಯ, (3) ಶ್ರೀಮತಿ ರಿಂದಮ್ಮ ಗಂಡ ಬಸವರಾಜ್ ಪಾಪಯ್ಯ ಸಾ: ಬೂದಿನಾಳ ಅಂದರೆ ಇವರೆಲ್ಲರೂ ಅನುಕ್ರಮವಾಗಿ ಶ್ರೀ ಪಾಪಯ್ಯರವರ ಹೆಂಡತಿ ಮತ್ತು ಸೊಸೆಯಂದಿರಾಗಿದ್ದು, ಶ್ರೀ ಪಾಪಯ್ಯ ತಂದೆ ಈರಪ್ಪರವರು ಬೂದಿನಾಳ್ ಗ್ರಾಮದ ಸರ್ವೇ ನಂ.110/ಆ ರಲ್ಲಿ 2 ಎಕರೆ ಜಮೀನನ್ನು ಹೊಂದಿದ್ದ ಕಾರಣ, ಪ್ರಥಮ ಹಂತದಲ್ಲಿ ದಿನಾಂಕ 27.07.2013ರಂದು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ ಯೋಜನೆಯಡಿ ಫಲಾನುಭವಿಗಳಾಗಲು ಅನರ್ಹರೆಂದು ಹಿಂಬರಹ ನೀಡಿದ್ದು, ಅದೇ ಪ್ರಕಾರ ಮತ್ತೊಬ್ಬ ಫಲಾನುಭವಿ ಶ್ರೀಮತಿ ಸಂಗಮ್ಮ ಗಂಡ ಮೂಕಯ್ಯರವರು ಅವರ ಗಂಡನ ತಂದೆಯ ಹೆಸರಿನಲ್ಲಿ ಹದ್ದಿನಾಳು ಗ್ರಾಮದ ಸರ್ವೇ ನಂ.55/ಅ ದಲ್ಲಿ 0.37 ಗುಂಟೆ ಮತ್ತು ಸರ್ವೇ ನಂ.55/ಆ ದಲ್ಲಿ 0.38 ಗುಂಟೆ ಜಮೀನನ್ನು ಹೊಂದಿದ್ದ

ಹಿನ್ನೆಲೆಯಲ್ಲಿ ಅವರು ಫಲಾನುಭವಿಗಳಾಗಲು ಅನರ್ಹರೆಂದು ದಿನಾಂಕ 27.07.2013ರಂದು ಹಿಂಬರಹ ನೀಡಿದ್ದು, ನಂತರ ಅದೇ 4 ಜನ ಫಲಾನುಭವಿಗಳಿಗೆ ದಿನಾಂಕ 02.08.2013ರಂದು ಅವರು ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಗಬ್ಬೂರು ಹೋಬಳಿಯ ಬೂದಿನಾಳು ಗ್ರಾಮದ ವಾಸಿಗಳಾಗಿದ್ದು, ಅವರಿಗೆ ದೇವದುರ್ಗ ತಾಲ್ಲೂಕು ವ್ಯಾಪ್ತಿಯಲ್ಲಿ ಯಾವುದೇ ಕೃಷಿ ಜಮೀನು ಇರುವುದಿಲ್ಲವೆಂದು ಸುಳ್ಳು ದೃಢೀಕರಣ ಪತ್ರಗಳನ್ನು ನೀಡಿರುತ್ತಾರೆ;

ಈ) ಶ್ರೀಮತಿ ದೇವಮ್ಮ, ದೇವದುರ್ಗ ತಾಲ್ಲೂಕಿನ ಹಿರೇಬೂದನೂರು ಗ್ರಾಮ ಪಂಚಾಯಿತಿಯ ಹಿಂದಿನ ಅಧ್ಯಕ್ಷೆ, ಶ್ರೀ ಶರಣಪ್ಪ, ಶ್ರೀ ಗೋಪಾಲಪ್ಪ ಕಟ್ಟಿಮನಿ ಮತ್ತು ದೇವದುರ್ಗ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಫಲಾನುಭವಿಗಳ ಕುಟುಂಬದ ಹಿರಿಯರ ಹೆಸರಿನಲ್ಲಿ ಜಮೀನು ಇದ್ದು, ನಿಗಮದ ನಿಯಮಾನುಸಾರ ಭೂಒಡೆತನಕ್ಕೆ ಅನರ್ಹರಾಗಿದ್ದಾಗ್ಯೂ ಸಹ ಸ್ಥಳೀಯವಾಗಿ ಅರ್ಹತೆಯ ಬಗ್ಗೆ ಪರಿಶೀಲನೆ ಮಾಡದೇ, ದಿನಾಂಕ 12.02.2013ರಂದು ಅನರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು, ಪರಿಶಿಷ್ಟ ಜಾತಿ ಮತ್ತು ಪಂಗಡದ ಇತರೆ ಅರ್ಹ ಫಲಾನುಭವಿಗಳು ಸೌಲಭ್ಯ ವಂಚಿತರಾಗುವಂತೆ ಮಾಡುತ್ತಾರೆ;

ಈ) ಶ್ರೀ ಗೋಪಾಲಪ್ಪ ಕಟ್ಟಿಮನಿ ಹಿಂದಿನ ಜಿಲ್ಲಾ ವ್ಯವಸ್ಥಾಪಕರು ಇವರ ನಂತರ ರಾಯಚೂರು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಮೂರು ತಿಂಗಳ ಕಾಲ ಹೆಚ್ಚುವರಿ ಜಿಲ್ಲಾ ವ್ಯವಸ್ಥಾಪಕರಾಗಿ ವರ್ಗಾವಣೆಯಾಗಿ ಬಂದ ಅ.ಸ.ನೌ.2 ಇವರು ಫಲಾನುಭವಿಗಳ ಅರ್ಹತೆಯ ಬಗ್ಗೆ ಪುನರ್‌ಪರಿಶೀಲನೆ ಮಾಡದೇ, ಪ್ರಸ್ತಾವನೆಯನ್ನು ಕೇಂದ್ರ ಕಛೇರಿಗೆ ಕಳುಹಿಸುವ ಮೂಲಕ ಕರ್ತವ್ಯಲೋಪವೆಸಗಿರುತ್ತಾರೆ;

